ಕಥೆ

# ನನ್ನ ಕೋಣೆ

■ ಗೀತಾ ಸೀತಾರಾಮ್
ಕಲೆ: ಸಂತೋಷ ಸಸಿಹಿತ್ಲು

‘ಅಮ್ಮಾ! ಇವತ್ತು ಶಾಲೆಯಿಂದ ಬರ್ತಾ ನಾನು ಶಾರ್ವರಿ ಮನೆಗೆ ಹೋಗಿದ್ದೆ. ಅಬ್ಬಬ್ಬಾ! ಅವಳ ಮನೆ ಎಷ್ಟು ದೊಡ್ಡ ಬಂಗಲೆ ಗೊತ್ತಾ? ಅವಳಿಗೆ, ಅವಳ ತಮ್ಮನಿಗೆ, ಬೇರೆ ಬೇರೆ ಕೋಣೆ ಇದೇಮ್ಮ. ನನಗೂ ಒಬ್ಬಳಿಗೇ ಒಂದು ಕೋಣೆ ಕೊಡಿಸಮ್ಮ. ಈ ಸಂಜೂ ಜೊತೆ ಕೋಣೆ ‘ಷೇರ್’ ಮಾಡೊಕ್ಕೆ ನನ್ನಿಂದ ಆಗೊಲ್ಲ. ಅವನ ಬಟ್ಟೆಬರೆ, ಪುಸ್ತಕ ಎಲ್ಲಾ ಮಂಚದ ಮೇಲೆ ಹರಡ್ತಾನೆ. ನನ್ನ ಮಡಿ ಬಟ್ಟೆಗಳ ಮಧ್ಯೆ, ಅವನ ಕೊಳೆ ‘ಟೀ ಶರ್ಟ್’ ‘ಬರ್ಮುಡಾ’ ಎಲ್ಲಾ ತುರುಕ್ತಾನೆ. ನನಗೂ ಹೇಳಿ ಹೇಳಿ ಸಾಕಾಯ್ತು, ರಾತ್ರಿ ಮಲಗ್ದಾಗ ನನ್ನ ಮೇಲೆ ಧೊಪ್ಪಂತ ಕಾಲು ಹಾಕ್ತಾನೆ. ನನ್ನ ನಿದ್ರೆ ಹಾಳಾಗುತ್ತೆ’ ಸ್ವಾತಿ ಆಕ್ಷೇಪಿಸಿದಳು.

‘ಅಲ್ಲಾ ಸ್ವಾತಿ, ಇಷ್ಟು ದೊಡ್ಡವಳಾಗಿದ್ದಿ... ಮನೆ ಪರಿಸ್ಥಿತಿ ನಿನಗೆ ಅರ್ಥ ಮಾಡಿಕೊಳ್ಳೋಕ್ಕೆ ಆಗೊಲ್ವ? ನಿನ್ನ ಗೆಳತಿ ಶಾರ್ವರಿ ತಂದೆ ಜಡ್ಜು. ಅವರದ್ದು ವಿಶಾಲವಾದ ಬಂಗಲೆ; ಒಬ್ಬೊಬ್ಬರಿಗೆ ಒಂದೊಂದು ಕೋಣೆ ಕೊಡುವಷ್ಟು ಕೋಣೆಗಳಿವೆ. ಆದರೆ ನಿನ್ನಪ್ಪ ಒಬ್ಬ ಶಾಲಾ ಮೇಷ್ಟ್ರು. ನಾನೊಬ್ಬ ಸ್ಟೆನೊಗ್ರಾಫರ್. ನಮ್ಮಂತಹ ಮಧ್ಯಮ ವರ್ಗದವರಿಗೆ ಇಂತಹ ಎರಡು ಕೋಣೆಗಳ ಮನೆ ಕೊಳ್ಳುವುದೇ ಒಂದು ಸಾಹಸ. ಹಾಗಿರುವಾಗ ನೀನು ಸಂಜೂ ಒಂದೇ ಕೋಣೆಯಲ್ಲಿ ‘ಅಡ್ಜಸ್ಟ್’ ಮಾಡಿಕೊಳ್ಳಬೇಕಲ್ವಾ? ಮೂರನೆಯ ಕೋಣೆ ಎಲ್ಲಿದೆ?’ ವಿಭಾ ಬುದ್ಧಿ ಹೇಳಿದಳು.

‘ಅಲ್ಲಮ್ಮ, ಆ ಹಿಂದಿನ ಸ್ಟೋರ್ ರೂಂ’ನಲ್ಲಿ ಬೇಡದ ಸಾಮಾನು ತುಂಬಿಸಿ ಇಟ್ಟಿದ್ದೀರಲ್ಲಾ. ಅದನ್ನು ಖಾಲಿ ಮಾಡಿಸು. ನಾನು ಅಲ್ಲಿಗೆ ನನ್ನ ಸಾಮಾನುಗಳನ್ನು ತೊಗೊಂಡು ಹೋಗ್ತೇನೆ. ಹೇಗೂ ದೊಡ್ಡ ಕಿಟಕಿಯಿದೆ. ಗಾಳಿಬೆಳಕು ಚೆನ್ನಾಗಿ ಬರುತ್ತೆ. ಒಂದು ಮಂಚಟೇಬಲ್ ಹಾಕುವಷ್ಟು ಸ್ಥಳ ಇದೆ. ಹಿಂದಕ್ಕೆ ಇರೋದ್ರಿಂದ ಬಂದು ಹೋಗುವವರ ಗಲಾಟೆ ಕೇಳ್ಸೊಲ್ಲ. ಓದೋಕ್ಕೆ ಪ್ರಶಾಂತವಾಗಿರುತ್ತದೆ. ಕೋಣೆ ಸ್ವಲ್ಪ ಚಿಕ್ಕದು; ಅಲ್ಮೆರಾ ಇಡೊಕ್ಕೆ ಆಗೊಲ್ಲ. ಪರವಾಗಿಲ್ಲ... ನಾನು ಸೂಟ್‌ಕೇಸ್‌ನಲ್ಲಿ ನನ್ನ ಬಟ್ಟೆ ಇಟ್ಟು ಕೊಳ್ತೇನೆ’ ಸ್ವಾತಿ ಮನವಿ ಇಟ್ಟಳು.

‘ಆಗಲಿ... ನಿಮ್ಮ ಪಪ್ಪ ಬಂದ ಮೇಲೆ ಖಾಲಿ ಮಾಡಿಸಲು ಹೇಳ್ತೇನೆ. ಅಲ್ಲಿಯವರೆಗೆ ಜಗಳವಾಡದೆ ಇರು ಸಂಜೂ ಜೊತೇಲಿ’ ವಿಭಾ ತೀರ್ಮಾನ ಮಾಡಿದಳು. ಸ್ವಾತಿ ಸಂಭ್ರಮದಿಂದ ಕೋಣೆಗೆ ಓಡಿದಳು. ಸರಸರನೆ ಸೂಟ್‌ಕೇಸಿನಲ್ಲಿ ತನ್ನ ಬಟ್ಟೆಗಳನ್ನೆಲ್ಲಾ ಮಡಚಿಟ್ಟಳು. ಆಟದಿಂದ ಹಿಂತಿರುಗಿದ ಸಂಜಯ್ ಅಕ್ಕನ ಕೆಲಸ ಕಂಡು ಅಚ್ಚರಿಗೊಂಡ!

‘ಇದೇನಕ್ಕಾ? ಊರಿಗೆ ಹೋಗ್ತಾ ಇದ್ದೀಯಾ?’

‘ಇಲ್ಲಾ ಸಂಜೂ... ಇನ್ಮೇಲೆ ಈ ಕೋಣೆಗೆ ನೀನೇ ರಾಜ! ನಾನು ಹಿಂದಿನ ಸ್ಟೋರ್ ರೂಂಗೆ ಹೋಗುತ್ತೇನೆ. ನನ್ನ ಗೆಳತಿ ಶಾರ್ವರಿ ಬಂದಾಗ ನಾವಿಬ್ಬರೂ ಬಾಗಿಲು ಹಾಕಿಕೊಂಡು ಓದಿಕೊಳ್ಳೋಕ್ಕೆ ನನಗೆ ನನ್ನದೇ ಕೋಣೆ ಬೇಕು. ನೀನು ಮಧ್ಯೆ ಮಧ್ಯೆ ಬಂದು ನನಗೆ ತೊಂದರೆ ಕೊಡ್ತೀಯಲ್ಲಾ ಅದಕ್ಕೆ ಅಪ್ಪಅಮ್ಮನಿಗೆ ಹೇಳಿ ಈ ಏರ್ಪಾಡು ಮಾಡಿಸುತ್ತಿದ್ದೇನೆ’ ಸ್ವಾತಿ ಗತ್ತಿನಿಂದ ಹೇಳಿದಳು. ಸಂಜಯನ ಮುಖ ಸಪ್ಪಗಾದದ್ದು ಅವಳ ಗಮನಕ್ಕೆ ಬರಲಿಲ್ಲ.

‘ಸ್ವಾತಿ! ಯಾರು ಬಂದಿದ್ದಾರೆ ನೋಡು ನಿನ್ನ ಕಮಲಾ ಅಜ್ಜಿ ಮಂಗಳೂರಿನಿಂದ ಬಂದಿದ್ದಾರೆ ನೋಡು ಬಾ... ಸಂಜೂ, ಅಜ್ಜಿಯ ಸಾಮಾನುಗಳನ್ನು ನಿಮ್ಮ ಕೋಣೆಯಲ್ಲಿಡು’ ಅಪ್ಪನ ಧ್ವನಿ ಕೇಳಿ ಬೆಚ್ಚಿದಳು ಸ್ವಾತಿ.

‘ಅಯ್ಯೋ ನನ್ನ ಗ್ರಹಗತಿಗಳೇ ಚೆನ್ನಾಗಿಲ್ಲ. ಇನ್ನು ಈ ಅಜ್ಜಿಯ ಜೊತೆ ಬೇರೆ ಕೋಣೆ ಹಂಚಿಕೊಳ್ಬೇಕಾ? ಅವರ ಸೇವೆ ಮಾಡೋದಕ್ಕೇ ನನ್ನ ಸಮಯವೆಲ್ಲಾ ಖರ್ಚಾಗುತ್ತೆ! ನನ್ನ ದುರ್ವಿಧಿಯೇ’ ಸ್ವಾತಿ ಅಲವತ್ತುಕೊಂಡೇ ಹೊರಬಂದಳು. ಸಂಜಯ್ ಓಡುತ್ತಾ ಬಂದು

